ಓ.ಎಸ್. ನಂ.155/2022
ಪಿಡಬ್ಲು-1

ದಿನಾಂಕ 10.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ವಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ

ವಾದಿಗೆ ಲಂಬಾಣಿ ಭಾಷೆ ಗೊತ್ತಿದ್ದು ಕನ್ನಡ ಭಾಷೆ ಬರದ ಶ್ರೀ ಟಿಟಿ ರಾಠೋಡರವರನ್ನು ಭಾಷಾಂತರಕಾರರಾಗಿ ನೇಮಿಸಿಕೊಳ್ಳಲಾಯಿತು.

ನಾನು ಈ ದಾವೆಯನ್ನು ಜಮೀನಿನ ವಿಷಯವಾಗಿ ದಾಖಲಿಸಿರುತ್ತೇನೆ. ನನ್ನ ಮಾವನ ತಂದೆಯ ಹೆಸರು ದೀರು ಎಂದು ಇರುತ್ತದೆ. ದೀರುಗೆ 08 ಜನ ಮಕ್ಕಳು ಎಂದರೆ ಸಾಕ್ಷಿ 03 ಜನ ಮಕ್ಕಳು ಮಾತ್ರ ಇರುತ್ತಾರೆ ಎಂದು ಹೇಳುತ್ತಾರೆ. ಅವರ ಹೆಸರು ಜೈರಾಮ ಮತ್ತು ನನ್ನ ಮಾವ ಲಚ್ಚು ಮತ್ತು ಇನ್ನೊಬ್ಬನ ಹೆಸರು ನನಗೆ ಗೊತ್ತಿಲ್ಲ. ಬದಲಿಬಾಯಿ, ಬಂಗಾರಿಬಾಯಿ, ಗೋಮಲಾಬಾಯಿ, ಸುಶಿಲಾಬಾಯಿ ನನ್ನ ಮಾವನ ಸಹೋದರಿಯರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ದೀರುರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಸ್ವತ್ತುಗಳು ದೀರುರವರ ಸ್ವಯಾರ್ಜಿತ ಆಸ್ತಿಗಳು ಇರುವುದರಿಂದ ದಾವಾ ಸ್ವತ್ತುಗಳಲ್ಲಿ ನನಗೆ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನಿಗೆ 04 ಜನ ಸಹೋದರಿಯರು ಇರುವುದಿಲ್ಲ ಎಂದರೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವನ ಸಹೋದರರು ಖಾಕಂಡಕಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವೆ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ನನ್ನ ಮಾವನ ಸ್ವತ್ತುಗಳು ಇರುವುದರಿಂದ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ